# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.

## ಪ್ರಕರಣ ಸಂಖ್ಯೆಃ ಸ್ಪೆಷಲ್ ಎಸ್.ವಿ.ಸಿ.1/2017

**ಪಿರ್ಯಾದಿದಾರರು** – ರಾಜ್ಯದ ಪರವಾಗಿ
ಲೋಕಾಯುಕ್ತ ಪ್ರಾಜ್ಞ ವಿಶೇಷ ಸರ್ಕಾರಿ ಅಭಿಯೋಜಕರು,
ಹಾವೇರಿ.

**– ವಿರುದ್ಧ –**

**ಆರೋಪಿತರು** – ರಾಜಾಭಕ್ಷ ತಂದೆ ಗರೀಬಸಾಬ ಗುಡಗೇರಿ.

**:: ದೋಷಾರೋಪಣೆ ::**

ಹಾವೇರಿಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರಾದ ಶ್ರೀ ಕೆ.ಸಿ. ಸದಾನಂದಸ್ವಾಮಿ; ನಾನು ಈ ಕೆಳಕಂಡ ಆರೋಪಿಯಾದ -

ರಾಜಾಭಕ್ಷ ತಂದೆ ಗರೀಬಸಾಬ ಗುಡಗೇರಿ,
ವಯಸ್ಸುಃ 62 ವರ್ಷ, ಉಃ ನಿವೃತ್ತ ಸಹಾಯಕ ಕೃಷಿ ಅಧಿಕಾರಿ,
ಜಲಾನಾಯನ ಇಲಾಖೆ, ಹಾನಗಲ್ಲ,
ವಾಸ ಸ್ಥಳಃ ಬಸ್ತಿ ಓಣಿ, ಹಾವೇರಿ.

ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆ,

ಈ ಪ್ರಕರಣ ದಾಖಲಾದ ಸಮಯದಲ್ಲಿ ಆರೋಪಿಯು ಹಾನಗಲ್ಲಿನ ಜಲಾನಯನ ಇಲಾಖೆಯಲ್ಲಿ ಸಹಾಯಕ ಕೃಷಿ ಅಧಿಕಾರಿ ಅಂತಾ ಕಾರ್ಯನಿರ್ವಹಿಸಿ, ನಂತರ ನಿವೃತ್ತರಾಗಿದ್ದು, ಬಲ್ಲ ಮೂಲಗಳಿಂದ ಆರೋಪಿಯು ಆದಾಯದ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ ಅಕ್ರಮ ಆಸ್ತಿ ಸಂಪಾದಿಸಿದ್ದು, ದಿನಾಂಕಃ24/04/1975 ರಂದು ಫೀಲ್ಡ್ ಅಸಿಸ್ಟಂಟ್, ಭೂಸಾರ ಸಂರಕ್ಷಣಾ ಇಲಾಖೆಯಲ್ಲಿ ಸರಕಾರಿ ಸೇವೆಗೆ ಸೇರಿ, ಅಲ್ಲಿಂದ ದಿನಾಂಕಃ22/3/2013 ರವರೆಗಿನ ಅವಧಿಯಲ್ಲಿ ರೂ.65,20,526/- ಮೌಲ್ಯದ ಸ್ಥಿರ ಮತ್ತು ಚರಾಸ್ತಿಗಳನ್ನು ಹೊಂದಿದ್ದು, ಈ ಮೇಲ್ಕಂಡ

ಅವಧಿಯಲ್ಲಿ ಆರೋಪಿಯು ಮಾಡಿರುವ ಖರ್ಚುಗಳ ಒಟ್ಟು ಮೊತ್ತ ರೂ.57,03,227/- ಆಗಿದ್ದು, ಇದೇ ಅವಧಿಯಲ್ಲಿ ಆರೋಪಿಗಿದ್ದ ಬಲ್ಲ ಮೂಲಗಳ ಆದಾಯ ರೂ.88,06,842/- ಆಗಿದ್ದು, ಆರೋಪಿಯು ಆದಾಯದ ಪ್ರಮಾಣಕ್ಕಿಂತಲೂ ಹೆಚ್ಚುವರಿ ಪ್ರಮಾಣದ ಆಸ್ತಿಯ ಮೊತ್ತ ರೂ.34,16,911/- ಮೌಲ್ಯದ (ಅಂದರೆ ಶೇ.38.79%) ರಷ್ಟು ಅಸಮತೋಲನ ಆಸ್ತಿಯನ್ನು ಆರೋಪಿ ಹಾಗೂ ಆರೋಪಿಯ ಪತ್ನಿ ಮತ್ತು ಮಕ್ಕಳ ಹೆಸರಿನಲ್ಲಿ ಹೊಂದಿದ್ದು, ಸದರಿ ಹೆಚ್ಚುವರಿ ಗಳಿಕೆಯನ್ನು ಆರೋಪಿಯು ಅಕ್ರಮವಾಗಿ ಸಂಪಾದಿಸಿದ್ದು, ಆ ಮೂಲಕ ಆರೋಪಿಯು ಪಿ.ಸಿ.ಕಾಯ್ದೆ-1988 ರ ಕಲಂ.13(1)(ಇ) ಜೊತೆಗೆ ಸಹಕಲಂ.13(2) ರಡಿಯ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾನೆ ಮತ್ತು ಅವು ಈ ನ್ಯಾಯಾಲಯದ ಸಂಜ್ಞೆಯಲ್ಲಿವೆ.

ಈ ಮೇಲೆ ಹೇಳಿದ ದೋಷಾರೋಪಣೆಗಳಿಗಾಗಿ ಈ ನ್ಯಾಯಾಲಯದ ಮುಂದೆ ಅಧಿವಿಚಾರಣೆ ನಡೆಯಲಿದೆ.

**ಹಾವೇರಿ** **(ಕೆ.ಸಿ. ಸದಾನಂದಸ್ವಾಮಿ)**
**ದಿನಾಂಕಃ 23/05/2024** **ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ಹಾಗೂ ವಿಶೇಷ ನ್ಯಾಯಾಧೀಶರು, ಹಾವೇರಿ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.**

**ಪ್ರಕರಣ ಸಂಖ್ಯೆ: ಸ್ಪೆಷಲ್ ಎಸ್.ವಿ.ಸಿ. 1/2017**

ಫಿರ್ಯಾದಿ - ಸರಕಾರ – ಪ್ರತಿನಿಧಿಸುವವರು
ಸರಕಾರಿ ಅಭಿಯೋಜಕರು, ಹಾವೇರಿ.

**– ವಿರುದ್ಧ –**

ಆರೋಪಿ - ರಾಜಾಭಕ್ಷ ತಂದೆ ಗರೀಬಸಾಬ ಗುಡಗೇರಿ.

**ಆರೋಪಿಯ ಹೇಳಿಕೆ**

ಪ್ರಶ್ನೆ-1 - ನಿಮ್ಮ ಮೇಲೆ ಓದಿ ಹೇಳಲಾದ ದೋಷಾರೋಪಣೆಯನ್ನು ತಿಳಿದುಕೊಂಡಿರುವಿರಾ?

ಉತ್ತರ - ತಿಳಿದಿದೆ.

ಪ್ರಶ್ನೆ-2 - ಸದರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ಅಧಿವಿಚಾರಣೆ ಬಯಸುತ್ತೀರೋ?

ಉತ್ತರ - ದೋಷಾರೋಪಣೆ ಒಪ್ಪಿಕೊಳ್ಳುವುದಿಲ್ಲ. ವಿಚಾರಣೆಯಾಗಬೇಕು.

ಆರೋಪಿ ಸಹಿ

(ತೆರೆದ ನ್ಯಾಯಾಲಯದಲ್ಲಿ ಆರೋಪಿತರಿಗೆ ದೋಷಾರೋಪಣೆಯನ್ನು ಓದಿ ಹೇಳಲಾಗಿದ್ದು, ಅವರು ಕೊಟ್ಟ ಹೇಳಿಕೆಯನ್ನು, ನಾನೇ ಖುದ್ದು ದಾಖಲಿಸಿಕೊಂಡಿರುತ್ತೇನೆಂದು ದೃಢೀಕರಿಸುತ್ತೇನೆ.)

**ಸ್ಥಳ: ಹಾವೇರಿ**
**ದಿನಾಂಕ: 23/05/2024**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ಹಾಗೂ ವಿಶೇಷ ನ್ಯಾಯಾಧೀಶರು, ಹಾವೇರಿ.**